2018 ಕ.ತೀ.ವ. 985

**ಸನ್ಮಾನ್ಯ ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ**

**ಲಕ್ಷ್ಮೀ ಬಾರ್ ಮತ್ತು ರೆಸ್ಟೋರೆಂಟ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***

**ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ಮೇರೆಗಿನ ರಿಟ್ ಅರ್ಜಿ.**

**ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 14(2)ನೇ ನಿಯಮದ ಮೇರೆಗೆ ಮದ್ಯವನ್ನು ಕಡಿಮೆ ಮಾರಾಟ ಮಾಡಲಾಗಿರುವ ಆರೋಪಕ್ಕಾಗಿ ಪ್ರತಿವಾದಿಗಳಾದ–ಅಬಕಾರಿ ಇಲಾಖೆಯು ಸುಮಾರು 7,73,100/– ರೂ.ಗಳ ಮೊತ್ತಕ್ಕೆ ದಂಡವನ್ನು ಹೆಚ್ಚಿಸಿದ ತಗಾದೆ ನೋಟೀಸಿನಿಂದ ಅರ್ಜಿದಾರರಾದ–ಲಕ್ಷ್ಮಿ ಬಾರ್ ಮತ್ತು ರೆಸ್ಟೋರೆಂಟ್, ಸಿಎಲ್–9 ಲೈಸೆನ್ಸುದಾರ ಇವರು ಬಾಧಿತರಾಗಿದ್ದಾರೆ.**

**ಸದರಿ ತಗಾದೆಯನ್ನು, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 14ನೇ ನಿಯಮದ (2)ನೇ ಉಪ–ನಿಯಮದ ಉಪಬಂಧಗಳ ಮೇರೆಗೆ ಪ್ರತಿವಾದಿ–ಅಬಕಾರಿ ಇಲಾಖೆಯು ಎತ್ತಿದೆ.**

**ದಾಖಲೆಯಲ್ಲಿ ಮಂಡಿಸಿದ ಅನುಬಂಧ–ಜಿ ಮತ್ತು ಅನುಬಂಧ–ಹೆಚ್ ಇವುಗಳ ಮೂಲಕ ಈ ನ್ಯಾಯಾಲಯದ ಸಮನ್ವಯ ಪೀಠದ ಈ ಹಿಂದಿನ ಎರಡು ಆಜ್ಞೆಗಳನ್ನು ಉಲ್ಲೇಖಿಸುತ್ತಾ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ದಿನಾಂಕ: 28.5.2016ರ ಅನುಬಂಧ–ಡಿ ಮತ್ತು ದಿನಾಂಕ: 16.8.2016ರ ಅನುಬಂಧ–ಇ ಇವು ತಗಾದೆ ನೋಟೀಸುಗಳಾಗಿದ್ದು, ಉಪ ಆಯುಕ್ತರು, ಬೆಂಗಳೂರು ಇವರು ಅರ್ಜಿದಾರರ ಅಹವಾಲನ್ನು ಆಲಿಸುವ ಯಾವುದೇ ಅವಕಾಶವನ್ನು**

*ರಿಟ್ ಅರ್ಜಿ ಸಂ. 10335/2017 (ಅಬಕಾರಿ), ದಿನಾಂಕ 27ನೇ ಜೂನ್, 2017.

ನೀಡದೆ 7,73,100/– ರೂ.ಗಳ ತಗಾದೆಯನ್ನು ಎತ್ತಿ ಅವುಗಳನ್ನು ನೇರವಾಗಿ ಹೊರಡಿಸಿದ್ದಾರೆ ಎಂದು ವಾದಿಸಿದ್ದಾರೆ. ಆದ್ದರಿಂದ, ಸದರಿ ತಗಾದೆ ನೋಟೀಸುಗಳು, ಈ ನ್ಯಾಯಾಲಯದಿಂದ ರದ್ದುಗೊಳ್ಳುವುದಕ್ಕೆ ಅರ್ಹವಾಗಿವೆ ಎಂಬುದು ಅರ್ಜಿದಾರರ ಅಹವಾಲಾಗಿದೆ.

ಪ್ರಸ್ತುತ ಮೊಕದ್ದಮೆಯಲ್ಲಿನ ವಾಸ್ತವಾಂಶಗಳಿಂದ, ಅರ್ಜಿದಾರರು ಎಲ್ಲಿಯೂ, ಪ್ರತ್ಯರ್ಜಿದಾರ ಇಲಾಖೆಯಿಂದ ಅಥವಾ ಅದರ ಅಧಿಕೃತ ಲೈಸೆನ್ಸುದಾರ/ಉತ್ಪಾದಕರಿಂದ ಮದ್ಯದ ಅಂಥ ಎತ್ತಿಕೊಳ್ಳುವಿಕೆಗೆ ಸೂಕ್ತವೆನಿಸುವ ಅಥವಾ ಅನ್ಯಥಾ ರೀತಿಯ ಯಾವುದೇ ಆಕ್ಷೇಪಣೆಯನ್ನು ಎತ್ತಿರುವುದಿಲ್ಲ ಅಥವಾ ವಿವರಣೆಯನ್ನು ನೀಡಿರುವುದಿಲ್ಲ ಎಂಬುದು ಕಂಡುಬರುತ್ತದೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದಂತೆ ಸಹಜ ನ್ಯಾಯ ತತ್ವವನ್ನು ಪಾಲಿಸಿದಾಗ್ಯೂ, ಅದು, ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳಲ್ಲಿ ಏನನ್ನೂ ಸಮರ್ಥಿಸಿದಂತಾಗುವುದಿಲ್ಲ. ವಾಸ್ತವ ಸನ್ನಿವೇಶದ ಬಗ್ಗೆ ಈಗಾಗಲೇ ತಿಳಿದಿರುವುದರಿಂದ, ಕಡೇ ಪಕ್ಷ ಅರ್ಜಿದಾರರು ಆಕ್ಷೇಪಣೆ ಎತ್ತುವರೆಂದು ಅಥವಾ ಹಾಗೆ ಮದ್ಯವನ್ನು ಎತ್ತಿಕೊಂಡಿದ್ದಕ್ಕೆ ಕಾರಣಗಳನ್ನು ನೀಡುವರೆಂದು ನಿರೀಕ್ಷಿಸಲಾಗಿತ್ತು. ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ ಅಂಥಹುದ್ದೇನೂ ಕಂಡುಬಂದಿಲ್ಲ. ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಭಾರತ ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ನ್ಯಾಯಾಲಯವನ್ನು ಸಂಪರ್ಕಿಸುವಂಥವರು, ನಿಶ್ಚಿತವಾಗಿಯೂ ಪ್ರಾಮಾಣಿಕವಾಗಿ ಮತ್ತು ನ್ಯಾಯಾಲಯಕ್ಕೆ ಸಂಪೂರ್ಣ ವಾಸ್ತವ ಸಂಗತಿಗಳನ್ನು ಮಂಡಿಸುವುದರೊಂದಿಗೆ ನ್ಯಾಯಾಲಯಕ್ಕೆ ಬರಬೇಕಾಗುತ್ತದೆ ಹಾಗೂ ಮುಖ್ಯ ಸಂಗತಿಗಳನ್ನು ಮರೆಮಾಚಲಾಗಿದೆ ಎಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಲಯವು ಕಟ್ಟಕಡೆಗೆ ಮೊಕದ್ದಮೆಯ ಗುಣಾರ್ಹತೆಗಳನ್ನು ಪರಿಶೀಲಿಸಲು ನಿರಾಕರಿಸಬಹುದಾಗಿದೆ ಮತ್ತು ಮುಖ್ಯ ಸಂಗತಿಗಳನ್ನು ಮರೆಮಾಚಿರುವ ಸಂಕ್ಷಿಪ್ತ ಕಾರಣದ ಆಧಾರ ಮಾತ್ರದಿಂದಲೇ ಅಂಥ ರಿಟ್ ಅರ್ಜಿಯನ್ನು ವಜಾಗೊಳಿಸಬಹುದಾಗಿದೆ.

ಎರಡೂ ಮೊಕದ್ದಮೆಯಲ್ಲೂ, ಈ ನ್ಯಾಯಾಲಯವು ಸಹಜ ನ್ಯಾಯ ತತ್ವಗಳ ಆರೋಪಿಸಲಾದ ಉಲ್ಲಂಘನೆಯ ಸಂಕ್ಷಿಪ್ತ ಕಾರಣದ ಮೇಲೆ ಈ ಅರ್ಜಿಯನ್ನು ಪುರಸ್ಕರಿಸಲು ಒಲವು ತೋರಿಸಿಲ್ಲ ಮತ್ತು ಇದಕ್ಕೆ ತದ್ವಿರುದ್ಧವಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ ಯಾವುದೇ ಪರಿಹಾರವನ್ನು

**ಈ ಮೊಕದ್ದಮೆಯು ಅರ್ಹಗೊಳಿಸಿರುವುದಿಲ್ಲವೆಂಬುದು ಈ ನ್ಯಾಯಾಲಯಕ್ಕೆ ಮನವರಿಕೆಯಾಗಿದೆ. ಆದುದರಿಂದ, ಈ ರಿಟ್ ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ.**

ಅರ್ಜಿದಾರರ ಪರ: ಶ್ರೀ ಕೆ. ಜಿ. ನಾಯಕ್, ವಕೀಲರು;

1 ರಿಂದ 4ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಎಂ. ಸುರೇಶ್ ರೆಡ್ಡಿ, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ:**

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 14(2)ನೇ ನಿಯಮದ ಮೇರೆಗೆ ಮದ್ಯವನ್ನು ಕಡಿಮೆ ಮಾರಾಟ ಮಾಡಲಾಗಿರುವ ಆರೋಪಕ್ಕಾಗಿ ಪ್ರತಿವಾದಿಗಳಾದ–ಅಬಕಾರಿ ಇಲಾಖೆಯು ಸುಮಾರು 7,73,100/– ರೂ.ಗಳ ಮೊತ್ತಕ್ಕೆ ದಂಡವನ್ನು ಹೆಚ್ಚಿಸಿದ ತಗಾದೆ ನೋಟೀಸಿನಿಂದ ಅರ್ಜಿದಾರರಾದ–ಲಕ್ಷ್ಮಿ ಬಾರ್ ಮತ್ತು ರೆಸ್ಟೋರೆಂಟ್, ಸಿಎಲ್–9 ಲೈಸೆನ್ಸುದಾರ ಇವರು ಬಾಧಿತರಾಗಿದ್ದಾರೆ.

2. ಸದರಿ ತಗಾದೆಯನ್ನು, ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 14ನೇ ನಿಯಮದ (2)ನೇ ಉಪ–ನಿಯಮದ ಉಪಬಂಧಗಳ ಮೇರೆಗೆ ಪ್ರತಿವಾದಿ–ಅಬಕಾರಿ ಇಲಾಖೆಯು ಎತ್ತಿದೆ.

3. ದಾಖಲೆಯಲ್ಲಿ ಮಂಡಿಸಿದ ಅನುಬಂಧ–ಜಿ ಮತ್ತು ಅನುಬಂಧ–ಹೆಚ್ ಇವುಗಳ ಮೂಲಕ ಈ ನ್ಯಾಯಾಲಯದ ಸಮನ್ವಯ ಪೀಠದ ಈ ಹಿಂದಿನ ಎರಡು ಆಜ್ಞೆಗಳನ್ನು ಉಲ್ಲೇಖಿಸುತ್ತಾ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು,

ದಿನಾಂಕ: **28.5.2016**ರ ಅನುಬಂಧ–ಡಿ ಮತ್ತು ದಿನಾಂಕ: **16.8.2016**ರ ಅನುಬಂಧ–ಇ ಇವು ತಗಾದೆ ನೋಟೀಸುಗಳಾಗಿದ್ದು, ಉಪ ಆಯುಕ್ತರು, ಬೆಂಗಳೂರು ಇವರು ಅರ್ಜಿದಾರರ ಅಹವಾಲನ್ನು ಆಲಿಸುವ ಯಾವುದೇ ಅವಕಾಶವನ್ನು ನೀಡದೆ 7,73,100/– ರೂ.ಗಳ ತಗಾದೆಯನ್ನು ಎತ್ತಿ ಅವುಗಳನ್ನು ನೇರವಾಗಿ ಹೊರಡಿಸಿದ್ದಾರೆ ಎಂದು ವಾದಿಸಿದ್ದಾರೆ. ಆದ್ದರಿಂದ, ಸದರಿ ತಗಾದೆ ನೋಟೀಸುಗಳು, ಈ ನ್ಯಾಯಾಲಯದಿಂದ ರದ್ದುಗೊಳ್ಳುವುದಕ್ಕೆ ಅರ್ಹವಾಗಿವೆ ಎಂಬುದು ಅರ್ಜಿದಾರರ ಅಹವಾಲಾಗಿದೆ.

4. ಇದಲ್ಲದೆ, ಮೇಲಿನ ಸದರಿ ನಿಯಮಗಳ 14(2)ನೇ ನಿಯಮವು, ಲೈಸೆನ್ಸಿನ ನಿಬಂಧನೆಗಳು ಮತ್ತು ಸದರಿ ನಿಯಮಗಳ ಪ್ರಕಾರ ಆರೋಪಿತ ಮದ್ಯದ ಕಡಿಮೆ ಮಾರಾಟ ಮಾಡಿರುವುದಕ್ಕಾಗಿ ಕಾರಣಗಳನ್ನು ವಿವರಿಸಲು ಲೈಸೆನ್ಸುದಾರನಿಗೆ ಅವಕಾಶವನ್ನು ನೀಡುವುದಕ್ಕೆ ಉಪಬಂಧಿಸಲು, ದಿನಾಂಕ: **1.8.2014**ರಿಂದ ಪರಿಣಾಮಕಾರಿಯಾಗುವುದರೊಂದಿಗೆ ಅದರ ರದ್ದತಿಗೆ ಮೊದಲು ಇದ್ದವೆಂಬುದಾಗಿ ಅವರು ವಾದಿಸಿದ್ದಾರೆ.

5. ಇನ್ನೊಂದೆಡೆ, ಪ್ರತಿವಾದಿಗಳ ಪರ ವಾದಿಸಿದ ಶ್ರೀ ಸುರೇಶ್ ರೆಡ್ಡಿ, ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿ ಇವರು, ಅರ್ಜಿದಾರರು ನಡೆಸುತ್ತಿರುವ ಬಾರ್ ಮತ್ತು ರೆಸ್ಟೋರೆಂಟ್ ಸಂಬಂಧದಲ್ಲಿ ಸಿಎಲ್–9 ಲೈಸೆನ್ಸನ್ನು ಹೊಂದಿರುವುದರಿಂದ, 2015–16ನೇ ವರ್ಷಾವಧಿಯಲ್ಲಿ ಮದ್ಯದ ಕಡಿಮೆ ಮಾರಾಟಕ್ಕಾಗಿ 7,73,100/– ರೂ.ಗಳಷ್ಟು ಮೊತ್ತಕ್ಕೆ ಸದರಿ ತಗಾದೆ ನೋಟೀಸುಗಳಿಗೆ ಯಾವುದೇ ಆಕ್ಷೇಪಣೆಯನ್ನು ಅವರು ಎಂದಿಗೂ ಎತ್ತಿಲ್ಲವೆಂದು ಮತ್ತು ತದ್ವಿರುದ್ಧವಾಗಿ, ಸದರಿ ಲೈಸೆನ್ಸುದಾರರು ಮುಂದಿನ 2016–17ನೇ ವರ್ಷಕ್ಕಾಗಿ ಲೈಸೆನ್ಸಿನ ನವೀಕರಣವನ್ನು ಕೋರುವಾಗ, ಹಣಕಾಸು ಬಿಕ್ಕಟ್ಟಿನಿಂದಾಗಿ ಮದ್ಯದ ಕಡಿಮೆ ಮಾರಾಟಕ್ಕಾಗಿ 2015–16ನೇ ಸಾಲಿಗಾಗಿ 7,73,100/– ರೂ.ಗಳ ಸದರಿ ದಂಡವನ್ನು ಸಂದಾಯ ಮಾಡಲು ಅವರು ಅಸಮರ್ಥರಾಗಿದ್ದು, ಆದರೆ ಅದನ್ನು ಅವರು ಸಂದಾಯ ಮಾಡುವುದಾಗಿ ಮತ್ತು ಅಂಥ ಸಂದಾಯಕ್ಕೆ ಒಳಪಟ್ಟು, 2016–17ನೇ ಸಾಲಿಗಾಗಿ ಲೈಸೆನ್ಸನ್ನು ನವೀಕರಿಸಬಹುದು ಎಂದು ಅನುಬಂಧ–ಆರ್1ರ ಮೂಲಕ ದಿನಾಂಕ: **28.6.2016**ರಂದು ಪ್ರತಿವಾದಿಯಾದ

ಅಬಕಾರಿ ಇಲಾಖೆಗೆ ಒಂದು ವಚನಬಂಧವನ್ನು ನೀಡಿದ್ದಾರೆಂದು ನ್ಯಾಯಾಲಯದ ಮುಂದೆ ವಾದಿಸಿದರು. ಮುಂದುವರಿದು ಅವರು, ಈ ವಚನಬಂಧದ ಮತ್ತು ಹಿಂದಿನ ತಗಾದೆ ನೋಟೀಸುಗಳು ಹಾಗೂ ಅಬಕಾರಿ ನಿರೀಕ್ಷಕರ ವರದಿಗಳ ಆಧಾರದ ಮೇಲೆ, ಲೈಸೆನ್ಸು ನೀಡುವ ಪ್ರಾಧಿಕಾರಿಯಾಗಿರುವ ಉಪ ಆಯುಕ್ತರು, ಬೆಂಗಳೂರು ಇವರು, ನಂತರ 7,73,100/– ರೂ.ಗಳ ತಗಾದೆಯನ್ನು ಲಗತ್ತಿಸಿ, ಅದನ್ನು ಸಂದಾಯ ಮಾಡಲು ಅರ್ಜಿದಾರರಿಗೆ ನಿರ್ದೇಶಿಸಿ, ಸ್ವತಃ ದಿನಾಂಕ: **30.6.2016**ರಂದು ಅನುಬಂಧ–ಆರ್2ರಲ್ಲಿ ಆದೇಶವನ್ನು ಹೊರಡಿಸಿದರು, ಆದರೆ ಈ ವಾಸ್ತವಾಂಶಗಳನ್ನು ಅರ್ಜಿದಾರರು ರಿಟ್ ಅರ್ಜಿಯಲ್ಲಿ ಮರೆಮಾಚಿರುವರು ಎಂದು ವಾದಿಸಿದರು.

6. ದಿನಾಂಕ: 7.3.2017ರಂದು, ಈ ನ್ಯಾಯಾಲಯದಲ್ಲಿ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ. ಸದರಿ ಆದೇಶವನ್ನು ಇದಕ್ಕೆ ಸಾಕಷ್ಟು ಮೊದಲೇ, ಎಂದರೆ ದಿನಾಂಕ: 30.6.2016ರಂದು ಉಪ ಆಯುಕ್ತರು ಹೊರಡಿಸಿರುವರಾದರೂ, ಉಪ–ಆಯುಕ್ತರ ಸದರಿ ಆದೇಶಕ್ಕೆ ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ತಕರಾರು ಮಾಡಿರುವುದಿಲ್ಲ.

7. ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಯಾವುದೇ ಬಲವಿಲ್ಲ ಮತ್ತು ಇದು ವಜಾಗೊಳ್ಳುವುದಕ್ಕೆ ಒಳಪಡುತ್ತದೆ ಎಂದು ಈ ನ್ಯಾಯಾಲಯವು ತೀರ್ಮಾನಿಸಿದೆ. ಇದಕ್ಕೆ ಕಾರಣಗಳು ಈ ಮುಂದಿನಂತಿವೆ:

8. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ 14ನೇ ನಿಯಮದ (2)ನೇ ಉಪ–ನಿಯಮದ ವಿಲೋಪಕ್ಕೆ ಮುಂಚೆ, ಸದರಿ ನಿಯಮದ ಎರಡನೇ ಪರಂತುಕವು ಲೈಸೆನ್ಸುದಾರನಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡಲು ಉಪಬಂಧಿಸಿದಾಗ್ಯೂ, ಸದರಿ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣವಾಗಿರುವ ಪ್ರತಿ ತಿಂಗಳಿಗೆ ಹಾಗೆ ನಿಗದಿಪಡಿಸಿದ ಮದ್ಯದ ಕನಿಷ್ಠ ಪ್ರಮಾಣವನ್ನು ಎತ್ತಿಕೊಳ್ಳಲು ಆತನು ವಿಫಲನಾದರೆ, ಹಾಗೆ ಎತ್ತಿಕೊಳ್ಳಲು ವಿಫಲವಾದ ಕಡಿಮೆ ಪ್ರಮಾಣದ ಮೇಲೆ ಹಾಗೂ ಅಂಥ ಎರಡು

ತಿಂಗಳು ಮದ್ಯ ಎತ್ತಿಕೊಳ್ಳಲು ವಿಫಲನಾದರೆ, ಪ್ರತಿ ಸಗಟು ಲೀಟರ್‌ಗೆ 100/– ರೂ.ಗಳ ದರದಲ್ಲಿ ದಂಡವನ್ನು ವಿಧಿಸುವ ಮೊದಲು, ಲೈಸೆನ್ಸು ಅದರಷ್ಟಕ್ಕೆ ಅದೇ ರದ್ದುಗೊಳ್ಳುತ್ತದೆ ಮತ್ತು ಉಪಬಂಧಿಸಿದ 14ನೇ ನಿಯಮದ ಎರಡನೇ ಪರಂತುಕವು, ಲೈಸೆನ್ಸ್ ಮೇಲೆ ದಂಡವನ್ನು ವಿಧಿಸುವ ಅಥವಾ ಅದನ್ನು ರದ್ದುಗೊಳಿಸುವ ಮುಂಚೆ, ಲೈಸೆನ್ಸ್ ನೀಡುವ ಪ್ರಾಧಿಕಾರವು ಅಹವಾಲು ಹೇಳಿಕೊಳ್ಳುವ ಸೂಕ್ತ ಅವಕಾಶವನ್ನು ನೀಡತಕ್ಕದ್ದು ಎಂದು ಉಪಬಂಧಿಸುತ್ತದೆ.

9. ಮೇಲೆ ಹೇಳಲಾದಂತೆ, ಸದರಿ 14(2)ನೇ ನಿಯಮವು, ದಿನಾಂಕ: 1.8.2014ರಿಂದ ಪರಿಣಾಮಕಾರಿಯಾಗುವಂತೆ ಶಾಸನ ಪುಸ್ತಕದಲ್ಲಿ ತಾನಾಗಿಯೇ ಬಿಟ್ಟುಹೋಗುತ್ತದೆ ಹಾಗೂ ಪ್ರಶ್ನಿತ ತಗಾದೆ ನೋಟೀಸುಗಳು ಮತ್ತು ಆದೇಶವನ್ನು ಸದರಿ ನಿಯಮಗಳ 14(2)ನೇ ನಿಯಮದ ಸದರಿ ಬಿಟ್ಟುಬಿಡುವಿಕೆಯ ನಂತರ ಉಪ ಆಯುಕ್ತರು ಹೊರಡಿಸಿದ್ದಾರೆ. ಹಾಗಾಗಿ ಆ ಉಪಬಂಧದ ಜಾರಿಯನ್ನು ಈಗ ಕ್ಲೇಮು ಮಾಡಲು ಸಾಧ್ಯವಿಲ್ಲ. ಅನ್ಯಥಾ ಹಾಗೆ ಮಾಡಿದಾಗ್ಯೂ, ಮದ್ಯವನ್ನು ಎತ್ತಿಕೊಳ್ಳುವ ವಿಷಯದ ಬಗ್ಗೆ ಅರ್ಜಿದಾರರ ಆಕ್ಷೇಪವಿದ್ದರೆ, ದಿನಾಂಕ: 20.5.2016ರಂದು ಮೊದಲ ತಗಾದೆ ನೋಟೀಸು ಅನುಬಂಧ–ಡಿ ಯನ್ನು ಅವರಿಗೆ ಜಾರಿ ಮಾಡಿದ ನಂತರ ಅಂಥ ಆಕ್ಷೇಪಣೆಯನ್ನು ಎತ್ತಲು ಅವರು ಸಂಪೂರ್ಣವಾಗಿ ಮುಕ್ತರಾಗಿದ್ದರು. ಆದರೆ, ದಿನಾಂಕ: **28.5.2016**ರಂದು ಅನುಬಂಧ–ಡಿಯಲ್ಲಿನ ತಗಾದೆ ನೋಟೀಸನ್ನು ಜಾರಿ ಮಾಡಿದ ನಂತರ ಮಾತ್ರವಲ್ಲದೆ, ದಿನಾಂಕ: **16.8.2016**ರಂದು ಎರಡನೇ ತಗಾದೆ ನೋಟೀಸ್ ಅನುಬಂಧ–ಇ ಯನ್ನು ಜಾರಿ ಮಾಡಿದ ನಂತರ ಸಹ, ಅರ್ಜಿದಾರರು, ಅಂಥ ದಂಡವನ್ನು ಅಥವಾ ಅದನ್ನು ಮಾಫಿ ಮಾಡಿದ್ದನ್ನು ಗಣನೆಗೆ ತೆಗೆದುಕೊಳ್ಳುವ ಸಂಬಂಧದಲ್ಲಿ ಮದ್ಯದ ಅಂಥ ಎತ್ತಿಕೊಳ್ಳುವಿಕೆಗೆ ದಂಡದ ತಗಾದೆಯ ವಿರುದ್ಧ ಪ್ರತ್ಯರ್ಜಿದಾರ–ಪ್ರಾಧಿಕಾರದ ಮುಂದೆ ಯಾವುದೇ ಆಕ್ಷೇಪ ಅಥವಾ ಆಕ್ಷೇಪಣೆಯನ್ನು ಎಂದಿಗೂ ಎತ್ತಿರುವುದಿಲ್ಲ.

10. ಇದಕ್ಕೆ ತದ್ವಿರುದ್ಧವಾಗಿ, ಮುಂದಿನ ವರ್ಷಕ್ಕೆ ಅಂದರೆ 2016–17ನೇ ಸಾಲಿಗೆ ಸಂಬಂಧಿಸಿದಂತೆ ಲೈಸೆನ್ಸಿನ ನವೀಕರಣವನ್ನು ಕೋರಲು, ದಿನಾಂಕ: 28.06.2016ರ ಅನುಬಂಧ–ಆರ್1ರ ಮೂಲಕ ಹಿಂದಿನ ವರ್ಷವಾದ

2015–16ನೇ ಸಾಲಿಗೆ ಮದ್ಯವನ್ನು ಎತ್ತಿಕೊಳ್ಳುವ ಸಂಬಂಧದಲ್ಲಿ ಸದರಿ ದಂಡವನ್ನು ಸಂದಾಯ ಮಾಡಬೇಕಿತ್ತು ಎಂದು ಇಲಾಖೆಯ ಮುಂದೆ ಸ್ಪಷ್ಟ ವಚನಬದ್ಧವನ್ನು ಅವರು ನೀಡಿರುತ್ತಾರೆ.

11. ವಾಸ್ತವವಾಗಿ, ಲೈಸೆನ್ಸುದಾರನ ಕಡೆಯಿಂದ ಯಾವುದೇ **ಅಪರಾಧೋದ್ದೇಶ ಅಥವಾ ಅಪರಾಧ ಸಂಕಲ್ಪ**ವನ್ನು ಅಗತ್ಯಪಡಿಸಿರುವುದಿಲ್ಲವೆಂದು ಈ ಕೆಳಗಿನ ದೀರ್ಘ ವಿವರಣೆಯಲ್ಲಿ ಉಲ್ಲೇಖಿಸಿರುವ 14ನೇ ನಿಯಮದ ಅವಗಾಹನೆಯಿಂದ ಗಮನಿಸಲಾಗಿದೆ. ಮದ್ಯವನ್ನು ಎತ್ತಿಕೊಂಡ ಸಂಬಂಧದಲ್ಲಿ, ಪ್ರತ್ಯರ್ಜಿದಾರ–ಇಲಾಖೆ ಅಥವಾ ಅಧಿಕೃತ ಮದ್ಯಸಾರ ಕಂಪನಿಗೆ ಪರಿಹಾರ ನೀಡಲು ಲೈಸೆನ್ಸುದಾರನಿಗೆ ನಿಗದಿಪಡಿಸಿದಂತೆ ಪೂರ್ಣ ಭರವಸೆ ನೀಡಲಾದ ಸರಬರಾಜಿನಲ್ಲಿನ ಹಣಕಾಸು ಹೊಣೆಗಾರಿಕೆಗೆ ಅಥವಾ ಕೊರತೆಬಿದ್ದ ದರವನ್ನು ನೀಡುವ ಹೊಣೆಗಾರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಕ್ರಮ ಮಾರುಕಟ್ಟೆಗಳು ಅಥವಾ ಮೂಲಗಳ ಮುಖಾಂತರ ಮಾರುಕಟ್ಟೆಯೊಳಗೆ ಅಕ್ರಮ ಮದ್ಯದ ಕಳ್ಳಸಾಗಾಣಿಕೆಯನ್ನು ತಡೆಯಲು ಮಾತ್ರ ಅಧಿಕೃತ ಲೈಸೆನ್ಸುದಾರಕನಿಂದ ಅಧಿಕೃತ ಮತ್ತು ಸೂಕ್ತವಾಗಿ ಉತ್ಪಾದಿಸಲಾದ ಮದ್ಯವನ್ನು ಮಾತ್ರ ಸರಬರಾಜು ಮಾಡುವುದನ್ನು ವಿನಿಯಮಿಸಲು ಶಾಸನ ಪುಸ್ತಕದಲ್ಲಿ ಸದರಿ ನಿಯಮವನ್ನು ಸೇರಿಸಲಾಗಿದೆ. ಅಂಥ ಹಾವಳಿಯನ್ನು ಪರಿಶೀಲಿಸಲು, ಎತ್ತಿಕೊಳ್ಳಲಾದ ಮದ್ಯದ ಪ್ರಮಾಣಕ್ಕೆ ದರವನ್ನು ಸಂದಾಯ ಮಾಡಲು ನಿಯಮದ ಮೇರೆಗೆ ಹೊಣೆಗಾರಿಕೆಯನ್ನು ನಿಗದಿಪಡಿಸಿದ್ದರೆ, ಅಹವಾಲನ್ನು ಆಲಿಸುವ ಪೂರ್ವ ಅವಕಾಶವನ್ನು ಅಗತ್ಯಪಡಿಸುವ ಸಲುವಾಗಿ ಲೈಸೆನ್ಸುದಾರನ ಕಡೆಯಿಂದ ಯಾವುದೇ **ಗುಣಮಟ್ಟ ಸಂಕಲ್ಪ**ವನ್ನು ಅಗತ್ಯಪಡಿಸಿ ದಂಡವನ್ನು ವಿಧಿಸಲಾಗಿದೆ ಎಂದು ಅದನ್ನು ಹೇಳಲಾಗುವುದಿಲ್ಲ. ಮದ್ಯ ಎತ್ತಿಕೊಂಡ ಸಂಗತಿಯನ್ನು 14ನೇ ನಿಯಮದ ಮೇರೆಗೆ ನಿಗದಿಪಡಿಸಲಾದ ಕನಿಷ್ಟ ಪ್ರಮಾಣಕ್ಕನುಸಾರವಾಗಿಯೇ ಲೆಕ್ಕಹಾಕಬೇಕಾಗುತ್ತದೆ ಮತ್ತು ಪ್ರತಿ ಸಗಟು (ಬಲ್ಕ್) ಲೀಟರ್‌ಗೆ 100/– ರೂ.ಗಳ ದಂಡದ ದರವನ್ನು ಸಹ ಅದರಲ್ಲಿ ಉಪಬಂಧಿಸಲಾಗಿದೆ. ಆದುದರಿಂದ, ಈಗ, ದಿನಾಂಕ: 1.8.2014ರಿಂದ ಶಾಸನ ಪುಸ್ತಕದಿಂದ ತೆಗೆದುಹಾಕಲಾಗಿರುವ ಸದರಿ ನಿಯಮಗಳ 14(2)ನೇ ನಿಯಮದ ಮೇರೆಗೆ ದಂಡ ವಿಧಿಸುವಿಕೆಯನ್ನು ಅನ್ವಯಿಸಿ, ಮದ್ಯದ ಅಂಥ ತೆಗೆದುಕೊಳ್ಳುವಿಕೆಗೆ

ಕಾರಣಗಳನ್ನು ವಿವರಿಸುವ ಸಂಬಂಧದಲ್ಲಿ ಪ್ರಸ್ತುತ ಮೊಕದ್ದಮೆಯಲ್ಲಿ ತಗಾದೆ ಮಾಡಲಾದಂತೆ ಅಹವಾಲನ್ನು ಆಲಿಸುವ ಅವಕಾಶವನ್ನು ನೀಡುವ ಮೂಲಕ ಪ್ರತಿಯಾಗಿ ಹೆಚ್ಚಿನ ಏನನ್ನು ಸಾಧಿಸಲಾಗುವುದಿಲ್ಲ. 14(2)ನೇ ನಿಯಮದ ಮೇರೆಗಿನ ಇತರ ಪರಿಣಾಮವನ್ನು ಎಂದರೆ ಲೈಸೆನ್ಸಿನ ರದ್ದತಿಯನ್ನು ಅನುಸರಿಸಿದ್ದಾರೆ, ಅಹವಾಲನ್ನು ಆಲಿಸುವ ಅವಕಾಶವನ್ನು ನೀಡುವ ಸಂಬಂಧದಲ್ಲಿ ಸದರಿ 2ನೇ ಉಪಬಂಧವನ್ನು ಹೆಚ್ಚು ಉಪಯುಕ್ತಕರವಾಗಿ ಒತ್ತಾಯಿಸಬಹುದಾಗಿತ್ತು. ಹಾಗಾಗಿ, ಸದರಿ 2ನೇ ಉಪಬಂಧದ ಅನ್ವಯವನ್ನು, ಸದರಿ ನಿಯಮಗಳ 14(2)ನೇ ನಿಯಮದ ಮೊದಲನೇ ಉಪಬಂಧದ ಆ ಭಾಗಕ್ಕೆ ಪರಿಮಿತಗೊಳಿಸಬೇಕು.

> *"ನಿಯಮ 14 – ಲೈಸೆನ್ಸುದಾರನು ಅಧಿನಿಯಮದ ಉಪಬಂಧಗಳ ಮೂಲಕ ಬದ್ಧನಾಗಿರುವುದು, ಇತ್ಯಾದಿ.–*
>
> *[(1)] ಲೈಸೆನ್ಸುದಾರ ಅಥವಾ ಆತನ ಉತ್ತಾರಾಧಿಕಾರಿಗಳು ಅಥವಾ ಹಸ್ತಾಂತರಗ್ರಾಹಿಗಳು, ಅಂಥ ಲೈಸೆನ್ಸನ್ನು ನೀಡಿರುವ ಅವಧಿ ಪೂರ್ಣಗೊಂಡ ನಂತರ, ಸಂದರ್ಭಾನುಸಾರ ಲೈಸೆನ್ಸಿನ ಮುಂದುವರಿಕೆಗೆ ಅಥವಾ ನವೀಕರಣಕ್ಕೆ ಯಾವುದೇ ಇರಲಿ ಅದಕ್ಕೆ ಯಾವುದೇ ಕ್ಲೇಮನ್ನು ಹೊಂದಿರತಕ್ಕದ್ದಲ್ಲ.*
>
> *[(2)] ನಮೂನೆ ಸಿಎಲ್–2ರಲ್ಲಿ ಚಿಲ್ಲರೆ ಅಂಗಡಿ ಲೈಸೆನ್ಸುಗಳನ್ನು ಮತ್ತು ನಮೂನೆ ಸಿಎಲ್–9 ರಲ್ಲಿ ಬಾರ್ ಲೈಸೆನ್ಸುಗಳನ್ನು ಹೊಂದಿರುವ ಲೈಸೆನ್ಸುದಾರರು, ಅಕ್ರಮ ಮದ್ಯವನ್ನು ಪಡೆಯುತ್ತಿಲ್ಲ ಮತ್ತು ಅಂಗಡಿಯಲ್ಲಿ ಮಾರಾಟ ಮಾಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಮದ್ಯವನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವ ಪ್ರಯತ್ನ ಮಾಡುತ್ತಿಲ್ಲವೆಂದು ಮತ್ತು ಆ ಮೂಲಕ ಮದ್ಯವನ್ನು ಅಧಿಕೃತ ಮೂಲಗಳಿಂದ ಮಾತ್ರ ಪಡೆದು ಗ್ರಾಹಕರಿಗೆ ಮಾಡಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ಲೈಸೆನ್ಸಿನ ಪ್ರತಿಯೊಂದು ವಿಧಕ್ಕೆ ನಿಗದಿಪಡಿಸಿದ ಲೈಸೆನ್ಸು ಶುಲ್ಕ, ಮೇಲ್ವೆಚ್ಚ ಭರಿಸಲಾದ*

*ಇತರ ಖರ್ಚುಗಳು, ಅಂಗಡಿ ಇರುವ ಸ್ಥಳ, ಕಾರ್ಯನಿರ್ವಹಣಾ ಪ್ರದೇಶ, ಹಿಂದಿನ ವರ್ಷಗಳಲ್ಲಿನ ಮದ್ಯದ ಮಾರಾಟ ಮತ್ತು ಅಂಥಹುವೇ ಅಂಶಗಳ ಆಧಾರದ ಮೇಲೆ ಅಂಗಡಿಗೆ ಪ್ರತಿ ತಿಂಗಳು ನಿಗದಿಪಡಿಸಿದ ಮದ್ಯದ (ಫೆನ್ನಿ, ವೈನ್ ಮತ್ತು ಬಿಯರ್ ಹೊರತುಪಡಿಸಿ) ಕನಿಷ್ಠ ಪ್ರಮಾಣವನ್ನು ಹೊಂದಿರುವ ಲೈಸೆನ್ಸುದಾರರು, ವಿತರಕ ಲೈಸೆನ್ಸ್‌ದಾರನಿಂದ (ಸಿಎಲ್–11) ಮಾರಾಟಕ್ಕಾಗಿ ಅಥವಾ ವಿತರಕ ಲೈಸೆನ್ಸುದಾರನಿಂದ (ಸಿಎಲ್–11ಎ) ವಿದೇಶಿ ಮದ್ಯದ ವಿಕ್ರಯಕ್ಕಾಗಿ ಪಡೆದುಕೊಳ್ಳತಕ್ಕದ್ದು. ಹಾಗೆ ಪ್ರತಿ ತಿಂಗಳಿಗಾಗಿ ನಿಗದಿಪಡಿಸಿದ ಮದ್ಯದ ಕನಿಷ್ಠ ಪ್ರಮಾಣವನ್ನು ಎತ್ತಿಕೊಳ್ಳಲು ಲೈಸೆನ್ಸುದಾರನು ವಿಫಲನಾದ ಸಂದರ್ಭದಲ್ಲಿ, ಎತ್ತಿಕೊಳ್ಳಲಾದ ಪ್ರಮಾಣದ ಮೇಲೆ ಪ್ರತಿಯೊಂದು ಸಗಟು ಲೀಟರಿಗೆ 100.00ರೂ.ಗಳ ದರದಲ್ಲಿ ದಂಡವನ್ನು ಸಂದಾಯ ಮಾಡಲು ಆತನು ಗುರಿಯಾಗತಕ್ಕದ್ದು.*

*ಪರಂತು, ಸತತ ಎರಡು ತಿಂಗಳುಗಳಿಗೆ ಹಾಗೆ ನಿಗದಿಪಡಿಸಿದ ಕನಿಷ್ಠ ಪ್ರಮಾಣವನ್ನು ಎತ್ತಿಕೊಳ್ಳಲು ಲೈಸೆನ್ಸುದಾರನು ವಿಫಲನಾದ ಸಂದರ್ಭದಲ್ಲಿ, ಲೈಸೆನ್ಸು ರದ್ದುಗೊಳ್ಳುವುದಕ್ಕೆ ಒಳಪಡಬಹುದು. ಮತ್ತು ಪರಂತು, ಲೈಸೆನ್ಸು ನೀಡುವ ಪ್ರಾಧಿಕಾರಿಯು, ದಂಡವನ್ನು ವಿಧಿಸುವ ಅಥವಾ ಲೈಸೆನ್ಸನ್ನು ರದ್ದುಗೊಳಿಸುವ ಮುಂಚೆ, ಲೈಸೆನ್ಸುದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಸೂಕ್ತ ಅವಕಾಶವನ್ನು ನೀಡತಕ್ಕದ್ದು.*

*ಸಿಎಲ್–2 (ಚಿಲ್ಲರೆ ಅಂಗಡಿ) / ಸಿಎಲ್–9 (ಬಾರ್) ಲೈಸೆನ್ಸುದಾರನು ಒಂದು ತಿಂಗಳಲ್ಲಿ ಎತ್ತಿಕೊಳ್ಳಬೇಕಾದ ಮದ್ಯದ (ಫೆನ್ನಿ, ವೈನ್ ಮತ್ತು ಬಿಯರ್ ಅನ್ನು ಹೊರತುಪಡಿಸಿ) ಕನಿಷ್ಠ ಪ್ರಮಾಣವು ಈ ಮುಂದಿನಂತಿರತಕ್ಕದ್ದು:*

| ಕ್ರಮ ಸಂಖ್ಯೆ | ಲೈಸೆನ್ಸಿನ ವಿಧ | ಲೈಸೆನ್ಸ್ ಶುಲ್ಕ | ಎತ್ತಿಕೊಳ್ಳಬೇಕಾದ ಮದ್ಯದ ಕನಿಷ್ಠ ಪ್ರಮಾಣ (ಫೆನ್ನಿ, ವೈನ್ ಮತ್ತು ಬಿಯರ್ ಹೊರತುಪಡಿಸಿ) (1 ಕೇಸ್ = 9 ಬಿ.ಎಲ್) |
|---|---|---|---|
| (01) | **ಚಿಲ್ಲರೆ ಅಂಗಡಿ (ಸಿಎಲ್–2)** | | |
| | (ಎ) 20 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನಗರ ಪಾಲಿಕೆ ಪ್ರದೇಶಗಳು | ರೂ. 2,23,000/– | 47 ಕೇಸ್‌ಗಳು ಅಥವಾ 423 ಸಗಟು ಲೀಟರ್‌ಗಳು. |
| | (ಬಿ) ಇತರ ನಗರ ಪಾಲಿಕೆ ಪ್ರದೇಶಗಳು | ರೂ. 1,82,000/– | 44 ಕೇಸ್‌ಗಳು ಅಥವಾ 396 ಸಗಟು ಲೀಟರ್‌ಗಳು |
| | (ಸಿ) ನಗರ ಪಾಲಿಕೆ ಕೌನ್ಸಿಲ್ ಪ್ರದೇಶಗಳು | ರೂ. 1,65,000/– | 38 ಕೇಸ್‌ಗಳು ಅಥವಾ 342 ಸಗಟು ಲೀಟರ್‌ಗಳು. |
| | (ಡಿ) ಪಟ್ಟಣ ಪುರಸಭೆ/ ಪಟ್ಟಣ ಪಂಚಾಯತ್ ಪ್ರದೇಶಗಳು | ರೂ. 1,25,000/– | 32 ಕೇಸ್‌ಗಳು ಅಥವಾ 288 ಸಗಟು ಲೀಟರ್‌ಗಳು. |
| | (ಇ) ಇತರ ಪ್ರದೇಶಗಳು | ರೂ. 1,00,000/– | 23 ಕೇಸ್‌ಗಳು 207 ಸಗಟು ಲೀಟರುಗಳು. |
| (02) | **ಉಪಹಾರ ಗೃಹ (ಬಾರ್) (ಸಿಎಲ್–9)** | ರೂ. 3,00,000/– | 52 ಕೇಸ್‌ಗಳು ಅಥವಾ 468 ಸಗಟು ಲೀಟರ್‌ಗಳು. |
| | (ಎ) 20 ಲಕ್ಷಕ್ಕಿಂತ | | |

| | | | |
|---|---|---|---|
| | ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನಗರ ಪಾಲಿಕೆ ಪ್ರದೇಶಗಳು | | |
| | (ಬಿ) ಇತರ ನಗರ ಪಾಲಿಕೆ ಪ್ರದೇಶಗಳು | ರೂ. 2,31,000/– | 47 ಕೇಸ್‌ಗಳು ಅಥವಾ 423 ಸಗಟು ಲೀಟರ್‌ಗಳು |
| | (ಸಿ) ನಗರ ಪಾಲಿಕೆ ಪರಿಷತ್ತು ಪ್ರದೇಶಗಳು | ರೂ. 1,82,000/– | 42 ಕೇಸ್‌ಗಳು ಅಥವಾ |
| | | | 378 ಸಗಟು |
| | | ಲೀಟರ್‌ಗಳು. | |
| | (ಡಿ) ಪಟ್ಟಣ ಪುರಸಭೆ/ ಪಟ್ಟಣ ಪಂಚಾಯತ್ ಪ್ರದೇಶಗಳು | ರೂ. 1,30,000/– | 34 ಕೇಸ್‌ಗಳು ಅಥವಾ 2306 ಸಗಟು ಲೀಟರ್‌ಗಳು. |
| | (ಇ) ಇತರ ಪ್ರದೇಶಗಳು | ರೂ. 1,00,000/– | 25 ಕೇಸ್‌ಗಳು 225 ಸಗಟು ಲೀಟರುಗಳು. |

12. ಪ್ರಸ್ತುತ ಮೊಕದ್ದಮೆಯಲ್ಲಿನ ವಾಸ್ತವಾಂಶಗಳಿಂದ, ಅರ್ಜಿದಾರರು ಎಲ್ಲಿಯೂ, ಪ್ರತ್ಯರ್ಜಿದಾರ ಇಲಾಖೆಯಿಂದ ಅಥವಾ ಅದರ ಅಧಿಕೃತ ಲೈಸೆನ್ಸುದಾರ/ ಉತ್ಪಾದಕರಿಂದ ಮದ್ಯದ ಅಂಥ ಎತ್ತಿಕೊಳ್ಳುವಿಕೆಗೆ ಸೂಕ್ತವೆನಿಸುವ ಅಥವಾ ಅನ್ಯಥಾ ರೀತಿಯ ಯಾವುದೇ ಆಕ್ಷೇಪಣೆಯನ್ನು ಎತ್ತಿರುವುದಿಲ್ಲ ಅಥವಾ ವಿವರಣೆಯನ್ನು ನೀಡಿರುವುದಿಲ್ಲ ಎಂಬುದು ಕಂಡುಬರುತ್ತದೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದಂತೆ ಸಹಜ ನ್ಯಾಯ ತತ್ವವನ್ನು ಪಾಲಿಸಿದಾಗ್ಯೂ ಅದು, ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳಲ್ಲಿ ಏನನ್ನೂ ಸಮರ್ಥಿಸಿದಂತಾಗುವುದಿಲ್ಲ. ವಾಸ್ತವ ಸನ್ನಿವೇಶದ ಬಗ್ಗೆ ಈಗಾಗಲೇ ತಿಳಿದಿರುವುದರಿಂದ, ಕಡೇ ಪಕ್ಷ ಅರ್ಜಿದಾರರು ಆಕ್ಷೇಪಣೆ ಎತ್ತುವರೆಂದು ಅಥವಾ ಹಾಗೆ ಮದ್ಯವನ್ನು ಎತ್ತಿಕೊಂಡಿದ್ದಕ್ಕೆ ಕಾರಣಗಳನ್ನು ನೀಡುವರೆಂದು ನಿರೀಕ್ಷಿಸಲಾಗಿತ್ತು. ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ ಅಂಥಹುದ್ದೇನೂ ಕಂಡುಬಂದಿಲ್ಲ.

13. ಇನ್ನೊಂದೆಡೆ, ಅರ್ಜಿದಾರರು, ಇತರ ವಿಷಯಗಳ ಜೊತೆಗೆ, ದಿನಾಂಕ 28.06.2016ರಂದು ಅವರು ಸ್ವತಃ ನೀಡಿದ ವಚನಬದ್ಧದ ಆಧಾರದ ಮೇಲೆ ಹೊರಡಿಸಲಾದ ತರುವಾಯದ ಆದೇಶದ ವಾಸ್ತವಾಂಶವನ್ನು ಹಾಗೂ ದಿನಾಂಕ: 30.6.2016ರಂದು ಉಪ ಆಯುಕ್ತರು ಅಂಥ ಆದೇಶವನ್ನು ಹೊರಡಿಸಿರುವರು ಎಂಬ ಮುಖ್ಯ ಸಂಗತಿಗಳನ್ನು ಈ ನ್ಯಾಯಾಲಯದಿಂದ ಮರೆಮಾಚಿದ್ದಾರೆ.

14. ಹಾಗಾಗಿ, ಅರ್ಜಿದಾರರು ಈ ರಿಟ್ ಅರ್ಜಿಯನ್ನು ವಾಸ್ತವಾಂಶಗಳ ಅಪೂರ್ಣ ಚಿತ್ರಣದೊಂದಿಗೆ ಮಂಡಿಸಿದ್ದಾರೆ.

15. ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಭಾರತ ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ನ್ಯಾಯಾಲಯವನ್ನು ಸಂಪರ್ಕಿಸುವಂಥವರು, ನಿಶ್ಚಿತವಾಗಿಯೂ ಪ್ರಾಮಾಣಿಕವಾಗಿ ಮತ್ತು ನ್ಯಾಯಾಲಯಕ್ಕೆ ಸಂಪೂರ್ಣ ವಾಸ್ತವ ಸಂಗತಿಗಳನ್ನು ಮಂಡಿಸುವುದರೊಂದಿಗೆ ನ್ಯಾಯಾಲಯಕ್ಕೆ ಬರಬೇಕಾಗುತ್ತದೆ ಹಾಗೂ ಮುಖ್ಯ ಸಂಗತಿಗಳನ್ನು ಮರೆಮಾಚಲಾಗಿದೆ ಎಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಲಯವು ಕಟ್ಟಕಡೆಗೆ ಮೊಕದ್ದಮೆಯ ಗುಣಾರ್ಹತೆಗಳನ್ನು ಪರಿಶೀಲಿಸಲು ನಿರಾಕರಿಸಬಹುದಾಗಿದೆ ಮತ್ತು ಮುಖ್ಯ ಸಂಗತಿಗಳನ್ನು ಮರೆಮಾಚಿರುವ ಸಂಕ್ಷಿಪ್ತ ಕಾರಣದ ಆಧಾರ ಮಾತ್ರದಿಂದಲೇ ಅಂಥ ರಿಟ್ ಅರ್ಜಿಯನ್ನು ವಜಾಗೊಳಿಸಬಹುದಾಗಿದೆ.

16. ಎರಡೂ ಮೊಕದ್ದಮೆಯಲ್ಲೂ, ಈ ನ್ಯಾಯಾಲಯವು ಸಹಜ ನ್ಯಾಯ ತತ್ವಗಳ ಆರೋಪಿಸಲಾದ ಉಲ್ಲಂಘನೆಯ ಸಂಕ್ಷಿಪ್ತ ಕಾರಣದ ಮೇಲೆ ಈ ಅರ್ಜಿಯನ್ನು ಪುರಸ್ಕರಿಸಲು ಒಲವು ತೋರಿಸಿಲ್ಲ ಮತ್ತು ಇದಕ್ಕೆ ತದ್ವಿರುದ್ಧವಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ ಯಾವುದೇ ಪರಿಹಾರವನ್ನು ಈ ಮೊಕದ್ದಮೆಯು ಅರ್ಹಗೊಳಿಸಿರುವುದಿಲ್ಲವೆಂಬುದು ಈ ನ್ಯಾಯಾಲಯಕ್ಕೆ ಮನವರಿಕೆಯಾಗಿದೆ. ಆದುದರಿಂದ, ಈ ರಿಟ್ ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ.

ತದನುಸಾರವಾಗಿ, ಈ ಅರ್ಜಿಯನ್ನು ವಜಾಗೊಳಿಸಲಾಗಿದೆ. ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.